# ಗಾಂಧಿ ಮತ್ತು ಗೋಡ್ಸೆ-1

ಗಾಂಧಿ ಜಗತ್ತಿನಲ್ಲಿ ಪದೇಪದೇ ಹುಟ್ಟುವುದಿಲ್ಲ ಎಂದು ಹೇಳುತ್ತಾರೆ.

ಆದರೆ, ಗೋಡ್ಸೆ ಪದೇಪದೇ ಹುಟ್ಟುವುದನ್ನು ನಾವು ನೋಡುತ್ತಿದ್ದೇವೆ. ಅವರಿಗೆ ಒಬ್ಬ ಗಾಂಧಿ ಬೇಕಿರುತ್ತದೆ; ಆದರೆ ಅವರಿಗೆ ಗಾಂಧಿ ಸಿಗುವುದಿಲ್ಲ. ಅವರು ಕಳವಳಗೊಳ್ಳುತ್ತಾರೆ, ಕಡೆಗೆ ಗಾಂಧಿಯಂತೆ ಕಾಣ ಬರುವವರನ್ನು, ಅವರು ಠಕ್ಕರಾಗಿದ್ದರೂ, ಗಾಂಧಿ ಎಂದು ತಿಳಿದು ಗುಂಡು ಹೊಡೆಯುತ್ತಾರೆ; ತಮ್ಮ ಮಿಶನ್ ಯಶಸ್ವಿಯಾಯಿತೆಂದು ಘೋಷಿಸುತ್ತಾರೆ.

ಗೋಡ್ಸೆ ಕೊಂದಿದ್ದರಿಂದ ಜನ ಸಹ, ಗುಂಡಿನೇಟು ತಿಂದವನು ಖಂಡಿತ ಗಾಂಧಿ ಇರಬೇಕೆಂದು ತಿಳಿದು ಅವನನ್ನು ಪೂಜಿಸಲು ಆರಂಭಿಸುತ್ತಾರೆ, ಅವನ ಸಿದ್ಧಾಂತಗಳನ್ನು ಪಾಲಿಸುವ ಘೋಷಣೆಯನ್ನು ಮಾಡುತ್ತಾರೆ.

ಹೀಗೆ ನೋಡಿದಾಗ, ಇಂದಿಗೂ ಸಹ ಗಾಂಧಿ ಹುಟ್ಟುತ್ತಿರುತ್ತಾರೆ.





# ಗಾಂಧಿ ಮತ್ತು ಗೋಡ್ಸೆ-2

ಗಾಂಧಿಗೆ ಒಂದೇ ತಲೆ ಇರಲು ಸಾಧ್ಯವಿತ್ತು, ಒಂದೇ ತಲೆಯಿತ್ತು ಸಹ... ಆದರೆ ಗೋಡ್ಸೆಗೆ ಹತ್ತು ತಲೆಗಳಿರಲು ಸಾಧ್ಯವಿತ್ತು, ಇತ್ತೂ ಸಹ. ಅವನು ಹತ್ತೂ ತಲೆಗಳಿಂದ ಯೋಚಿಸಬಲ್ಲವನಾಗಿದ್ದ, ಮಾತನಾಡಬಲ್ಲವನಾಗಿದ್ದ. ಒಂದು ತಲೆಯಿಂದ ಆ ಬಡಪಾಯಿಯ ಕೆಲಸಗಳಾದರೂ ನಡೆಯಲು ಹೇಗೆ ಸಾಧ್ಯವಿತ್ತು? ಒಂದು ವೇಳೆ ತಾನು ಒಂದು ತಲೆಯಿಂದ ಯೋಚಿಸಿದ್ದರೆ, ತಾನೂ ಸಹ ಗಾಂಧಿಯಾಗುತ್ತಿದ್ದೆ ಎಂದು ಅವನು ಯೋಚಿಸುತ್ತಿದ್ದ; ಆದರೆ ಅವನು ಯಾವುದೇ ಪರಿಸ್ಥಿತಿಯಲ್ಲಿ ಗಾಂಧಿಯಾಗಲು ಬಯಸುತ್ತಿರಲಿಲ್ಲ, ಗಾಂಧಿಯಾಗುವ ಬಗ್ಗೆ ಅವನಿಗೆ ಅತೀವ ಜುಗುಪ್ಸೆಯಿತ್ತು. ಹೀಗಾಗಿ ಅವನು ಒಂದು ತಲೆಯ ವ್ಯಕ್ತಿಯನ್ನು ಕಂಡಾಗ, ಅವನನ್ನು ಭಯಾನಕ ವ್ಯಕ್ತಿಯೆಂದು ತಿಳಿಯುತ್ತಿದ್ದ. ಅವನನ್ನು ಆ ಕೂಡಲೇ ಕೊಂದು ಹಾಕುತ್ತಿದ್ದ ಅಥವಾ ಕೊಲ್ಲುವ ಬಯಕೆಯನ್ನಿಟ್ಟುಕೊಳ್ಳುತ್ತಿದ್ದ.